ಸಿವಿಲ್?ನ್ಯಾಯಾಧೀಶರು ಮತ್ತು ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯ, ತರೀಕೆರೆ

ಸಿ.ಸಿ.ಸಂಖ್ಯೆ.1949/2023

:ಉಪಸ್ಥಿತರು:

ಶ್ರೀ ಶಿವಕುಮಾರ್.ಆರ್, ಬಿ.ಎ.ಎಲ್. ಎಲ್ಎಲ್.ಬಿ.

ಪಿರ್ಯಾದುದಾರರುಃ ಅಜ್ಜಂಪುರ ಬೀರೂರು ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರುಃ ಶ್ರೀ ಬಿ.ಆರ್.ಮಂಜುನಾಥ್,
ಬಿನ್ ಲೇಟ್ ಶ್ರೀ ಬಿ.ಎಂ.ರಾಮಯ್ಯ,
ವಯಸ್ಸು 72 ವರ್ಷಗಳು,
ವಾಸಃ ಓಂ ಇಂದಿರಾ ನಿವಾಸ,
ಕೋಟೆ ರಸ್ತೆ, ಶಿವಮೊಗ್ಗ ,

:: ಆರೋಪಣೆ ::

ದಿನಾಂಕ 10.07.2023 ರಂದು ಸಂಜೆ 4.45 ಗಂಟೆ ಸಮಯದಲ್ಲಿ ಬೀರೂರು ಪೋಲೀಸ್ ಠಾಣಾ ಸರಹದ್ದಿನ ಕುಡ್ಲೂರು ಗೇಟ್ ಬಳಿ ಗೋವಿಂದಪ್ಪರವರ ತೋಟದ ಹತ್ತಿರ ಹಾದು ಹೋಗಿರುವ ಎನ್.ಹೆಚ್.206 ರ ಸರ್ವೀಸ್ ರಸ್ತೆಯ ಸಿಮೆಂಟ್ ರಸ್ತೆಯಲ್ಲಿ ಆರೋಪಿಯಾದ ನೀವು ತಮ್ಮ ಹೆಂಡತಿ ಶ್ರೀಮತಿ ಮಂಜುಳಾರವರೊಂದಿಗೆ ಶಿವಮೊಗ್ಗದಿಂದ ಮೈಸೂರಿಗೆ ಹೋಗಲೆಂದು ಕೆಎ.14.ಎನ್.9186 ರ ಇನ್ನೋವಾ ಕಾರಿನಲ್ಲಿ ಶ್ರೀಮತಿ ಮಂಜುಳಾರವರನ್ನು ಕಾರಿನ ಮುಂದಿನ ಸೀಟಿನಲ್ಲಿ ಕೂರಿಸಿಕೊಂಡು ನೀವು ವಾಹನ ಚಾಲನೆ ಮಾಡಿಕೊಂಡು ತರೀಕೆರೆ ಮಾರ್ಗವಾಗಿ ಕುಡ್ಲೂರು ಗೇಟ್ ಹತ್ತಿರ ಹೋಗುತ್ತಿರುವಾಗ ಆರೋಪಿಯಾದ ನೀವು ಕಾರನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ಸಿಮೆಂಟ್ ರಸ್ತೆಯ ಪಕ್ಕದ ಚರಂಡಿಯ ಸ್ಲ್ಯಾಬ್ ಡಿಕ್ಕಿ ಹೊಡೆಸಿ ಅಪಘಾತ ಪಡಿಸಿದ್ದು, ಆದಕಾರಣ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಕೆಎ.14.ಎನ್.9186 ರ ಇನ್ನೋವಾ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸಿಮೆಂಟ್ ರಸ್ತೆಯ ಪಕ್ಕದ ಚರಂಡಿಯ ಸ್ಲ್ಯಾಬ್‌ಗೆ ಡಿಕ್ಕಿ

ಹೊಡೆಸಿದ ಪರಿಣಾಮ ಕಾರಿನಲ್ಲಿದ್ದ ಶ್ರೀಮತಿ ಮಂಜುಳಾರವರ ಎದೆಗೆ, ಪಕ್ಕೆಗೆ, ಹೊಟ್ಟೆಗೆ, ಕೈಕಾಲುಗಳಿಗೆ ಮತ್ತು ತೊಡೆಗೆ ತೀವ್ರವಾಗಿ ಪೆಟ್ಟಾಗಿ ಮೃತಪಟ್ಟಿದ್ದು ಆದಕಾರಣ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 304(ಎ)ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಪ್ರಶ್ನೆ1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರಾ?

ಉತ್ತರ

ಪ್ರಶ್ನೆ2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕಃ **31.07.2024**

(ಶಿವಕುಮಾರ್.ಆರ್)
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ., ತರೀಕೆರೆ.